# <u>ಕರ್ನಾಟಕ ವಿಧಾನ ಪರಿಷತ್ತು</u>

1. ಮಾನ್ಯ ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ
2. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 111
3. ಉತ್ತರಿಸುವ ದಿನಾಂಕ : 04.03.2025
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ತ್ರೈವಾರ್ಷಿಕ ಚುನಾವಣೆ ನಡೆಸಲು ವಿಳಂಬಕ್ಕೆ ಕಾರಣವೇನು? | **<u>ಚುನಾವಣಾ ವಿಳಂಬಕ್ಕೆ ಕಾರಣಗಳು :</u>**<br>1. ಸಂಘದ ಚುನಾವಣಾಧಿಕಾರಿಗೆ ಕರಡು ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಹಲವಾರು ಸದಸ್ಯರು ಸದಸ್ಯತ್ವದ ಕುರಿತು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿದಾಗ ಸಂಘದ ಬೈಲಾ ನಿಯಮ ಸಂಖ್ಯೆ.2ರ ಅವಕಾಶಗಳಂತೆ ಸದಸ್ಯತ್ವ ಅರ್ಜಿಗಳು ಅಪೂರ್ಣವಾಗಿರುತ್ತವೆ.<br>2. ಕಲಂ 25ರ ವಿಚಾರಣಾ ವರದಿಯಂತೆ ಸಂಘದ ಸದಸ್ಯತ್ವ ಕುರಿತು ಯಾವುದೇ ಪತ್ರಿಕಾ ಪ್ರಕಟಣೆಯಾಗಲೀ, ಸಂಘದ ಅಧಿಕೃತ ವೆಬ್‌ಸೈಟಿನಲ್ಲಿಯಾಗಲೀ ಯಾವುದೇ ಪ್ರಚಾರ ನೀಡದೇ ದಿನಾಂಕ:25.02.2022ರಂದು ಸುಮಾರು 2235 ಅರ್ಜಿದಾರರ ಸದಸ್ಯತ್ವ ಶುಲ್ಕ ರೂ.39.97 ಲಕ್ಷಗಳನ್ನು ಒಂದೇ ವ್ಯಕ್ತಿಯು ಸಂಘದ ಬ್ಯಾಂಕಿನ ಖಾತೆಗೆ ದಿನಾಂಕ:25.02.2022 ರಂದೇ ಪಾವತಿಸಿದ್ದು, ಅದೇ ದಿನಾಂಕದಂದು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಎಲ್ಲಾ ಅರ್ಜಿಗಳನ್ನು ಒಂದೇ ಬಾರಿಗೆ ಅನುಮೋದಿಸಿರುವುದು ನಿಯಮ ಬಾಹಿರವಾಗಿರುತ್ತದೆ.<br>3. ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ ಕಲಂ 25ರ ವಿಚಾರಣಾ ವರದಿಯನ್ವಯ ಸಂಘದಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಲು ಕ್ರಮವಿಡಲಾಗುತ್ತಿದೆ ಹಾಗೂ ಸಂಘದ ಚುನಾವಣೆಯನ್ನು ಜರುಗಿಸಲು ಚುನಾವಣಾಧಿಕಾರಿಯನ್ನು ನೇಮಿಸಲಾಗಿರುತ್ತದೆ.<br>4. ಸಂಘದ ಚುನಾವಣೆ ಕುರಿತಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 11952/2023 ಮತ್ತು ರಿಟ್ ಅರ್ಜಿ ಸಂಖ್ಯೆ:3802/2025 ದಾಖಲಾಗಿದ್ದು, ದಿನಾಂಕ:18.02.2025 ರಂದು ವಿಚಾರಣೆ ಬಂದಿದ್ದು, ಮುಂದಿನ ವಿಚಾರಣೆ ದಿನಾಂಕ ನಿಗದಿಯಾಗಿರುವುದಿಲ್ಲ.<br><br>ಈ ಮೇಲಿನ ಕಾರಣಗಳಿಂದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಚುನಾವಣೆ ನಡೆಸಲು ವಿಳಂಬವಾಗಿರುತ್ತದೆ. |

| | | |
|---|---|---|
| (ಆ) | ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಕುರಿತು ಆರೋಪಗಳ ಬಗ್ಗೆ ಈಗಾಗಲೇ ಒಂದು ಬಾರಿ ತನಿಖೆಯಾಗಿದ್ದರೂ ಕೂಡ ಈಗ ಮತ್ತೆ ನಿಯಮ 25ರ ಅಡಿಯಲ್ಲಿ ತನಿಖೆ ಮಾಡಿ ಚುನಾವಣೆಯನ್ನು ಇನ್ನಷ್ಟು ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? | ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವಿರುದ್ಧದ ದೂರು ಅಂಶಗಳ ಕುರಿತು ದಿನಾಂಕ:10.10.2022ರಲ್ಲಿ ದೂರು ಅರ್ಜಿ ವಿಚಾರಣೆ ನಡೆದಿರುತ್ತದೆ. ಆದರೆ ಕಲಂ 25ರ ಅಡಿಯಲ್ಲಿ ಒಂದು ಬಾರಿ ಮಾತ್ರ ವಿಚಾರಣೆ ನಡೆದು, ದಿನಾಂಕ:31.12.2024ರಂದು ವಿಚಾರಣಾ ವರದಿ ಸಲ್ಲಿಕೆಯಾಗಿರುತ್ತದೆ. ದೂರು ಅರ್ಜಿಯ ವಿಚಾರಣೆಯ ಅಂಶಗಳು ಹಾಗೂ ಕಲಂ 25ರ ಅಡಿಯ ವಿಚಾರಣಾ ಅಂಶಗಳು ಬೇರೆ ಬೇರೆಯಾಗಿರುತ್ತವೆ.<br><br>ವಿಚಾರಣೆ ಮಾಡುವ ಕಾರಣಕ್ಕಾಗಿ ಚುನಾವಣೆಯನ್ನು ನಡೆಸಲು ವಿಳಂಬವಾಗಿರುವುದಿಲ್ಲ. |
| (ಇ) | ಈಗಾಗಲೇ ಪರಿಷತ್ತಿಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿದ್ದರೂ ಕೂಡ ಸಕಾಲದಲ್ಲಿ ಚುನಾವಣೆಯನ್ನು ನಡೆಸದೇ ಆಡಳಿತಾತ್ಮಕ ಸಮಸ್ಯೆಗಳು ಎದುರಾಗುತ್ತಿರುವುದರಿಂದ ಯಾವ ಕಾಲಮಿತಿಯೊಳಗೆ ಈ ಸಮಸ್ಯೆಗಳನ್ನು ಬಗೆಹರಿಸಿ ಚುನಾವಣೆಯನ್ನು ನಡೆಸಲಾಗುವುದು? (ವಿವರಣೆ ನೀಡುವುದು) | ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ ಕಲಂ 25ರ ವಿಚಾರಣಾ ವರದಿಯನ್ವಯ ಸಂಘದಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿದ ನಂತರ ಚುನಾವಣೆಯನ್ನು ಜರುಗಿಸಬೇಕಾಗಿರುತ್ತದೆ.<br><br>ಸಂಘದ ಚುನಾವಣೆ ಕುರಿತಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ.11952/2023 ಮತ್ತು 3802/2025ರ ಆದೇಶದಂತೆ ಕ್ರಮ ಜರುಗಿಸಲಾಗುವುದು. |
| (ಈ) | ಆಡಳಿತಾಧಿಕಾರಿಯ ಅವಧಿಯಲ್ಲಿ ಹಮ್ಮಿಕೊಂಡಿರುವ ಚಟುವಟಿಕೆಗಳಿಗೆ ಸಿಬ್ಬಂದಿ ವೇತನ ಹಾಗೂ ಇತರೆ ಕೆಲಸಗಳಿಗೆ ಬಳಸಿದ ಅನುದಾನದ ಮೂಲ ಯಾವುದು? (ಸಂಪೂರ್ಣ ವಿವರಣೆ ನೀಡುವುದು) | ಸಿಬ್ಬಂದಿ ವೇತನ ಹಾಗೂ ಇತರೆ ಕೆಲಸಗಳಿಗೆ ಸದಸ್ಯರ ಸದಸ್ಯತ್ವದ ವಂತಿಗೆಯಿಂದ ಬಂದ ಹಣ ಹಾಗೂ ಬಾಡಿಗೆಯಿಂದ ಬಂದ ಮೊತ್ತದಲ್ಲಿ ಭರಿಸಲಾಗುತ್ತಿದೆ. |

**ಸಿಒ 73 ಸಿಎಸ್ಆರ್ 2025**

K. N Rajanna

**(ಕೆ.ಎನ್. ರಾಜಣ್ಣ)**
**ಸಹಕಾರ ಸಚಿವರು**